ದನಗಳನ್ನು ಕಡಿಯುವುದಕ್ಕೆ ಅವಕಾಶ ಇಲ್ಲ, ಈಗ ಅಲ್ಲಿ ಸಣ್ಣ ಸಣ್ಣ ಕರುಗಳನ್ನು ಸಹ ಕಡಿಯಲು ತೆಗೆದುಕೊಂಡು ಹೋಗುತ್ತಾರೆ. ಕರುಗಳನ್ನು ಕಡಿಯುವುದಕ್ಕೆ ಅವಕಾಶ ಇಲ್ಲ ಅದನ್ನಾದರೂ ನಿಯಂತ್ರಣ ಮಾಡುತ್ತೀರಾ ? ಇದಕ್ಕೆ ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟವಾದ ಉತ್ತರ ಹೇಳಬೇಕು.

ಅಧ್ಯಕ್ಷರು.—ಕಾನೂನಿನಲ್ಲಿ ಏನಾದರೂ ಅವಕಾಶ ಇದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ.

ಅಧ್ಯಕ್ಷರು.—ಅವಕಾಶ ಇಲ್ಲ ಎಂದು ಹೇಳುತ್ತಿದ್ದಾರೆ:

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಮಾಡಿದ ಬಹಳ ಚೆನ್ನಾಗಿ ಮಾಡಿದ್ದಾರೆ. ಸಂತೋಷ ಅವರ ಮಾದವನ್ನು ನಾನು ಕೇಳಿದ್ದೇನೆ. ಮುಂದೆ ನೋಡೋಣ.

ನಿಯಮ ೩೩ಳಿರ ಮೇರೆಗೆ

೧) ಮಂಡ್ಯ ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಕಟ್ಟುತ್ತಿರುವ ಗೃಹಗಳು ಕಳೆದ ಹತ್ತು ವರ್ಷಗಳಿಂದ ಅಪೂರ್ಣಗೊಂಡಿರುವುದು

ಶ್ರೀ ಎಂ.ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿಯ ಪರವಿಂದ ಮಂಡ್ಯ ನಗರದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಗೃಹಗಳ ನಿರ್ಮಾಣ ಯೋಜನೆಯನ್ನು ಕೈಗೊಂಡು ಹತ್ತು ವರ್ಷಗಳು ಕಳೆದಿದೆ. ಇಷ್ಟು ದೀರ್ಘಕಾಲ ಕಳೆದರೂ ಮನೆಗಳು ಅಪೂರ್ಣವಾಗಿರುವುದು ಸರ್ಕಾರ ಮನಗಂಡಿದೆಯೇ ಈ ಯೋಜನೆಯನ್ನು ಸರ್ಕಾರ ಪೂರ್ಣಗೊಳಿಸಲು ಏನು ಕ್ರಮ ಕೈಗೊಳ್ಳುತ್ತದೆ ?

ಶ್ರೀ ಎಂ. ವೀರಪ್ಪ ಮೊಯಿಲಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ ಈ ವಿಚಾರವನ್ನು ಸಂಬಂಧಪಟ್ಟ ಬಂದರು ಮತ್ತು ವಿನಾಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

೨) ರಾಜ್ಯದಲ್ಲಿ ರೈತರು ವ್ಯವಸಾಯಕ್ಕೆ ಉಪಯೋಗಿಸುವ ಟ್ರಾಕ್ಟರ್ ಹಾಗೂ ಟ್ರೇಲರುಗಳ ಫಿಟ್‌ನೆಸ್ ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳುವ ಅವಧಿಯನ್ನು ಎರಡು ವರ್ಷಗಳಿಗೆ ಏರಿಸಲು ಒತ್ತಾಯ

ಶ್ರೀ ಪರಿಕಾಲ್ ಎಂ. ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ರೈತರು ವ್ಯವಸಾಯಕ್ಕೆ ಉಪಯೋಗಿಸುವ ಅಂದರೆ ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಉಪಯೋಗಿಸುವ ಟ್ರಾಕ್ಟರ್ಸ್ ಹಾಗೂ ಟ್ರೇಲರ್ಸ್‌ಗಳ ಫಿಟ್‌ನೆಸ್ ಸರ್ಟಿಫಿಕೇಟ್‌ಗಳನ್ನು ಈಗ ಪ್ರತಿ ವರ್ಷ ಪುನರ್ ನವೀಕರಣ ಮಾಡಬೇಕಾಗಿದೆ. ರೈತರು ಪ್ರತಿ ವರ್ಷ ತಮ್ಮ ಟ್ರಾಕ್ಟರ್ಸ್ ಹಾಗೂ ಟ್ರೇಲರ್ಸ್‌ಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿಗೆ ತೆಗೆದುಕೊಂಡು ಹೋಗಿ ಸುಮಾರು ೬೦೦ ರೂಪಾಯಿಗಳಷ್ಟು ಖರ್ಚು ಮಾಡಬೇಕಾಗಿದೆ. ಮೊದಲು ಎರಡು ವರ್ಷಕ್ಕೆ ಒಂದು ಸಾರಿ ಪುನರ್ ನವೀಕರಣ ಮಾಡುವ ವ್ಯವಸ್ಥೆ ಇದ್ದು ಈಗ ಒಂದು ವರ್ಷಕ್ಕೆ ಒದಲಾಯಿಸಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಈ ಟ್ರಾಕ್ಟರ್ ಹಾಗೂ ಟ್ರೇಲರ್ಸ್‌ಗಳ ಫಿಟ್‌ನೆಸ್ ಸರ್ಟಿಫಿಕೇಟ್‌ಗಳ ಪುನರ್ ನವೀಕರಣ ಅವಧಿಯನ್ನು ಎರಡು ವರ್ಷಕ್ಕೆ ಏರಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಆಹಾರ ಮತ್ತು ಸಾರಿಗೆ ಸಚಿವರು).—ಅಧ್ಯಕ್ಷರೇ,

ಟ್ರಾಕ್ಟರ್‌ಗಳಿಗೋದಕ್ಕೆ ಅರ್ಹತಾ ಪ್ರಮಾಣ ಪತ್ರದ ಆವಶ್ಯಕತೆ ಇರುವುದಿಲ್ಲ. ಆದರೆ ಟ್ರೈಲರ್‌ಗಳನ್ನು ಜೋಡಿಸಲ್ಪಟ್ಟ ಟ್ರಾಕ್ಟರ್ ಟ್ರೈಲರ್‌ಗಳಿಗೆ ಮಾತ್ರ ಅರ್ಹತಾ ಪ್ರಮಾಣ ಪತ್ರದ ಅವಶ್ಯಕತೆ ಇದೆ.

ನಿಯಮ ೬೨ ಕೇಂದ್ರ ಮೋಟಾರು ವಾಹನಗಳ ನಿಯಮಾವಳಿಗಳು ೧೯೮೯ರನುಸಾರ ಹೊಸ ಟ್ರಾಕ್ಟರ್ ಟ್ರೈಲರ್ ಅರ್ಹತಾ ಪ್ರಮಾಣ ಪತ್ರವು ೫ ವರ್ಷಗಳವರೆಗೆ ಜಾರಿಯಲ್ಲಿರುವುದು. ೫ನೇ ವರ್ಷಗಳ ನಂತರ ಪ್ರತಿ ೧ ವರ್ಷದವರೆಗೆ ಮಾತ್ರ ನವೀಕರಣ ಮಾಡಲಾಗುವುದು. ಆದ್ದರಿಂದ, ನೋಂದಣಿ ಮಾಡಲ್ಪಟ್ಟ ದಿನದಿಂದ ಎರಡು ವರ್ಷಗಳು ಮುಗಿದ ಮೇಲೆ ಟ್ರಾಕ್ಟರ್ ಟ್ರೈಲರ್‌ಗಳು

ದುರಸ್ತಿ ಮಾಡಿಸಬೇಕಾಗುತ್ತದೆ. ದುರಸ್ತಿಗಾಗಿ ಸ್ವಲ್ಪ ಹಣ ಖರ್ಚಾಗುವುದು ಸ್ವಾಭಾವಿಕ. ನಂತರ ಟ್ರಾಕ್ಟರ್ ಟ್ರೈಲರ್‌ಗಳನ್ನು ಅರ್ಹತಾ ಪ್ರಮಾಣ ಪತ್ರ ನವೀಕರಣಕ್ಕಾಗಿ ಹಾಜರುಪಡಿಸಬೇಕಾಗುತ್ತದೆ.

ಹೊಸ ಮೋಟಾರು ವೆಹಿಕಲ್ಸ್ ಆಕ್ಟ್ ೧೯೮೮ ಪ್ರಾರಂಭವಾಗುವುದಕ್ಕೆ ಮೊದಲು ಅಂದರೆ ೧-೭-೧೯೮೮ರ ಹಿಂದೆ, ವ್ಯವಸಾಯಕ್ಕೆ ಉಪಯೋಗಿಸುವ ಟ್ರಾಕ್ಟರ್ ಟ್ರೈಲರ್‌ಗಳಿಗೆ ಎರಡು ವರ್ಷಗಳ ವರೆಗೆ ಅರ್ಹತಾ ಪ್ರಮಾಣ ಪತ್ರ ನವೀಕರಿಸಲಾಗುತ್ತಿತ್ತು.

ಸಾರ್ವಜನಿಕ ಸುರಕ್ಷತೆ ಹಿತದೃಷ್ಟಿಯಿಂದ ರಾಷ್ಟ್ರದ ಎಲ್ಲಾ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಏಕರೂಪವಾದ ಅರ್ಹತಾ ಪ್ರಮಾಣ ಪತ್ರ ಪದ್ಧತಿ ಜಾರಿಗೆ ತರುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ಸೆಂಟ್ರಲ್ ಮೋಟಾರ್ ವೆಹಿಕಲ್ಸ್ ರೂಲ್ಸ್ ೧೯೮೯ ಜಾರಿಗೆ ತಂದಿರುವುದರಿಂದ ವಾಹನಗಳ ಪ್ರಮಾಣ ಪತ್ರವನ್ನು ಒಂದು ವರ್ಷದವರೆಗೆ ಮಾತ್ರ ನವೀಕರಣ ಮಾಡಲಾಗುತ್ತಿದೆ. ಈಗ ಕೇಂದ್ರ ಸರ್ಕಾರವೇ ಈ ನಿಯಮ ಮಾಡಿರುವುದರಿಂದ, ಟ್ರಾಕ್ಟರ್ ಟ್ರೈಲರ್‌ಗಳ ಪ್ರಮಾಣ ಪತ್ರದ ನವೀಕರಣದ ಅವಧಿಯನ್ನು ಒಂದು ವರ್ಷದಿಂದ ಎರಡನೇ ವರ್ಷಕ್ಕೆ ಬದಲಾವಣೆ ಮಾಡಬೇಕಾದರೆ ಸೆಂಟ್ರಲ್ ಮೋಟಾರ್ ವೆಹಿಕಲ್ಸ್ ರೂಲ್ಸ್ ೧೯೮೯ಕ್ಕೆ ಸೂಕ್ತವಾಗಿ ತಿದ್ದುಪಡಿ ತರಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಟ್ರಾಕ್ಟರ್ ಟ್ರೈಲರ್‌ಗಳ ಅರ್ಹತಾ ಪ್ರಮಾಣ ಪತ್ರ ಅವಧಿ ನಿಗಧಿಪಡಿಸಲು ಅಧಿಕಾರವಿರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ ನಿಯಮ ೩೩೪ರಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಮಾನ್ಯ ಈ ವಿಷಯ ತರಬಹುದಾಗಿದೆ ಆದರೆ ಇದರಲ್ಲಿ ಅನೇಕ ವಿಷಯಗಳು ಅಡಕವಾಗಿವೆ. ಆದ್ದರಿಂದ ದಯಮಾಡಿ ಇದನ್ನು ಅರ್ಧ ಗಂಟೆಯ ಮೇಲಿನ ಚರ್ಚೆಗೆ ಪರಿವರ್ತನೆ ಮಾಡಿದರೆ ಒಳ್ಳೆಯದೆಂದು. ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ನಾವು ನೋಟೀಸ್ ಕೊಟ್ಟಿದ್ದೇ ಗಮನ ಸೆಳೆಯುವ ಸೂಚನೆ ಎಂದು. ಅದು ಹೇಗೋ ನಿಯಮ ೩೩೪ ಆಗಿದೆ.

ಅಧ್ಯಕ್ಷರು.—ಆಯಿತು ತಾವು ಇನ್ನೊಂದು ನೋಟಿಸ್ ಕೊಡಿ.

(೩) ಉಳ್ಳಾಲದಲ್ಲಿ ಕಡಲ ಕೊರೆತವನ್ನು ತಡೆಗಟ್ಟಲು ತಡೆಗೋಡೆಗಳ ನಿರ್ಮಾಣ

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ಉಳ್ಳಾಲದಲ್ಲಿ ಕಡಲು ಕೊರೆತ ಕಳೆದ ಮೂರು ವರ್ಷಗಳಿಂದ ಎಡೆಬಿಡದೆ ನಡೆದಿದೆ. ಇದರಿಂದಾಗಿ ನೂರಾರು ಬಡವರ ಮನೆಗಳು, ಮೀನು ಕಸುಬಿನವರ ಅನೇಕ ಶೆಡ್ಡುಗಳು ನಾಶವಾಗಿ ಹೋಗಿವೆ. ಇದೀಗ ಈ ವರ್ಷ ಇದೇ ತಿಂಗಳಿನಲ್ಲಿ ಕಡಲಿನ ನೀರು ಉಳಿದ ಭಾಗಗಳಿಗೂ ಆವರಿಸಿದೆ. ಉಳ್ಳಾಲದ ಈ ಭಾಗಕ್ಕೆ ಶಾಶ್ವತ ತಡೆಗೋಡೆ ಕಟ್ಟುವ ಕುರಿತು ಅನೇಕ ವರ್ಷಗಳಿಂದ ಕೇಳುತ್ತಾ ಬರಲಾಗಿದೆ ಇನ್ನೂ ಕೆಲಸ ಪ್ರಾರಂಭವಾಗಿರುವುದಿಲ್ಲ. ಆದರಿಂದಾಗಿ ಪರಿಸರದ ಜನರು ತುಂಬಾ ಕಂಗಾಲಾಗಿರುತ್ತಾರೆ.

ಆದಕಾರಣ ಈ ವರ್ಷವೇ ಉಳ್ಳಾಲದಲ್ಲಿ ತಡೆಗೋಡೆ ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭಿಸಬೇಕು. ಈ ಕುರಿತು ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಯಂಥ ಸಂಬಂಧಪಟ್ಟ ಬಂದರು. ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೇಳಲಾಗುವುದು.

(೪) ಬೆಂಗಳೂರಿನ ರಾಜಾಜೀನಗರದಲ್ಲಿ ನೈರ್ಮಲ್ಯತೆಯ ಕೆಲಸಗಳು ಸರಿಯಾಗಿ ನಡೆಯದೇ ಇರುವುದು.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾನಗರ ಸ್ವಚ್ಛತೆ ಹಾಗೂ ಸೌಂದರ್ಯ ನಗರವೆಂದು ತುಂಬಾ ಹೆಸರುವಾಸಿಯಾಗಿದ್ದು ಈಗ ಹಾಳಿ ಬೆಂಗಳೂರು ನಗರದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯತೆ ಕೆಲಸ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದರಿಂದ ಬೆಂಗಳೂರು ನಗರಕ್ಕೆ ಸೌಂದರ್ಯ ನಗರ ಎನ್ನುವ ಹೆಸರು ದಿನೇ ದಿನೇ ಕಡಿಮೆಯಾಗುತ್ತಿದೆ. ಈ ಸಂಬಂಧದಲ್ಲಿ ನನ್ನ ಕ್ಷೇತ್ರವಾದ ರಾಜಾಜೀನಗರದಲ್ಲಿ ನೈರ್ಮಲ್ಯತೆಯ ಕೆಲಸಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಗಮನಹರಿಸಿ ಸೂಕ್ತ ಆದೇಶ ನೀಡಬೇಕೆಂದು ಕೋರುತ್ತೇನೆ.